ವಿಧೇಯಕಗಳನ್ನು ದಿನಾಂಕ: 13ನೇ ಜನವರಿ, 2011ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2010

2. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2011

3. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2011

4. ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2011

5. ಕೈಗಾರಿಕಾ ನಿಯೋಜನೆ (ಸ್ಥಾಯಿ ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕ, 2005

6. ಕರ್ನಾಟಕ ರಾಜ್ಯ ಸಾರ್ವಜನಿಕ ದಾಖಲೆಗಳ ವಿಧೇಯಕ, 2010

ಅಧ್ಯಕ್ಷರು: ಈಗ ಮಾನ್ಯ ಬಸವರಾಜ ಬೊಮ್ಮಾಯಿ ಯವರಿಂದ statement.

10. ಸಚಿವರ ಹೇಳಿಕೆ:

ವಿಷಯ: ಕೃಷ್ಣಾ ಜಲ ವಿವಾದ ನ್ಯಾಯಾದೀಕರಣದ ಅಂತಿಮ ತೀರ್ಮಾನದ ವರದಿಯ ಅಂಶಗಳ ಮೇಲೆ ಮಾನ್ಯ ಜಲಸಂಪನ್ಮೂಲ ಸಚಿವರ ಹೇಳಿಕೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕಕ್ಕೆ ಅತ್ಯಂತ ಮಹತ್ವವಿರುವಂಥ ಕರ್ನಾಟಕ ರಾಜ್ಯದ ಕೃಷಿ ವಲಯಕ್ಕೆ, ಆರ್ಥಿಕ ವಲಯಕ್ಕೆ ಮತ್ತು ಕೃಷ್ಣಾ ಜಲಾನಯನ ಪ್ರದೇಶದ ರೈತರ ಬದುಕಿನ ಭವಿಷ್ಯವನ್ನು ಬರೆಯುವಂಥ ಅತ್ಯಂತ ಮಹತ್ವದ ಕೃಷ್ಣಾ ಜಲ ವಿವಾದದ ನ್ಯಾಯಾಧಿಕರಣ-IIರ ತೀರ್ಪು ಏನು ಬಂದಿದೆ, ಅದರ ಮುಖ್ಯಾಂಶಗಳನ್ನು ಸದನದ ಮುಂದೆ ಇಡುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತಾ, ಕೆಲವು ಪ್ರಮುಖಾಂಶಗಳನ್ನು ನಾನಿಲ್ಲಿ ನನ್ನ ಹೇಳಿಕೆಯಲ್ಲಿ ಮಂಡಿಸುತ್ತಿದ್ದೇನೆ. ಅದರ ಪೂರ್ಣ ಪಾಠ ಸುಮಾರು 4 ಪುಟಗಳಲ್ಲಿದೆ. ಅದನ್ನು ಎಲ್ಲಾ ಸದಸ್ಯರಿಗೂ ಒದಗಿಸುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಭಾರತ

ಸರ್ಕಾರದ ಜಲ ಸಂಪನ್ಮೂಲ ಸಚಿವಾಲಯವು ಅಂತರರಾಜ್ಯ ಕೃಷ್ಣಾ ನದಿ ಮತ್ತು ನದಿ ಕಣಿವೆಯ ಜಲ ವಿವಾದದ ತೀರ್ಮಾನಕ್ಕಾಗಿ ದಿ: 02-04-2004ರ ಅಧಿಸೂಚನೆಯಲ್ಲಿ ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿ ರಚಿಸಿದೆ. ಈ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯು (ಕೃಜವಿನ್ಯಾ-II) ದಿ: 30-12-2010ರಂದು ತನ್ನ ಅಂತಿಮ ಐತೀರ್ಪನ್ನು ಘೋಷಿಸಿದೆ. ಈ ಕೃಷ್ಣಾ ಜಲ ವಿವಾದದ ನ್ಯಾಯಾಧಿಕರಣ-II ಬಚಾವತ್ ನ್ಯಾಯ ಮಂಡಳಿಯು (ಕೃಜವಿನ್ಯಾ- II) ಸ್ಕೀಂ-ಎ ರಡಿ ಕರ್ನಾಟಕಕ್ಕೆ ಹಂಚಿಕೆ ಮಾಡಿರುವ 734 ಟಿ.ಎಂ.ಸಿ. ಯನ್ನು ಹಾಗೆಯೇ ಉಳಿಸಿದೆ. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ-II ಈ ಕೆಳಗೆ ವಿವರಿಸಿರುವಂತೆ ವಿವಿಧ ಅವಲಂಬನೆಗಳಿಗೆ ನೀರಿನ ಲಭ್ಯತೆಯನ್ನು ಲೆಕ್ಕಾಚಾರ ಮಾಡಿದೆ. Dependability ಎಂದು ನಾವೇನು ಕರೆಯುತ್ತೇವೆ, ಅದರಲ್ಲಿ ಮೊದಲು ಸರಾಸರಿ ವಾರ್ಷಿಕ ಲಭ್ಯತೆ 2578 ಟಿ.ಎಂ.ಸಿ., ಶೇ. 50ರಷ್ಟು ಅವಲಂಬನೆಯ ಲಭ್ಯತೆ 2626 ಟಿ.ಎಂ.ಸಿ., ಶೇ. 60ರಷ್ಟು ಅವಲಂಬನೆಯ ಲಭ್ಯತೆಯಲ್ಲಿ 2528 ಟಿ.ಎಂ.ಸಿ., ಶೇ65ರಷ್ಟು ಅವಲಂಬನೆಯ ಲಭ್ಯತೆಯಲ್ಲಿ 2293 ಟಿ.ಎಂ.ಸಿ. ಮತ್ತು ಶೇ. 75ರಷ್ಟು ಅವಲಂಬನೆಯ ಲಭ್ಯತೆಯಲ್ಲಿ 2173 ಟಿ.ಎಂ.ಸಿ. ನೀರಿನ ಲೆಕ್ಕಾಚಾರವನ್ನು ಮಾಡಿದೆ. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ-II ಈಗ ಲಭ್ಯತೆಯನ್ನು ಸರಾಸರಿ ಹಾಗೂ ಶೇ.65ರ ಅವಲಂಬನೆಯನ್ನು ಆಧರಿಸಿ ಕ್ರಮವಾಗಿ 2578 ಟಿ.ಎಂ.ಸಿ. ಮತ್ತು 2293 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಿದೆ. ಹಿಂದೆ ಬಚಾವತ್ ನ್ಯಾಯ ಮಂಡಳಿ (ಕೃಜವಿನ್ಯಾ-I) ರಾಜ್ಯಗಳಿಗೆ ಹಂಚಿಕೆ ಮಾಡಿದ್ದ 2130 ಟಿ.ಎಂ.ಸಿ. (ಮರು ಉತ್ಪತ್ತಿ ಸುಮಾರು 70 ಟಿ.ಎಂ.ಸಿ. ನೀರು ಸೇರಿದೆ). ನಾವು ಬಳಕೆ ಮಾಡಿರುವ ನೀರು ಮತ್ತೆ ಆ ವ್ಯವಸ್ಥೆಗೆ, ಆ ಜಲಾನಯನ ಪ್ರದೇಶಕ್ಕೆ ವಾಪಸ್ ಬರುವುದು ಏನಿದೆ, Regeneration ಏನಿದೆ, ಮರು ಉತ್ಪತ್ತಿ ಏನಿದೆ, ಅದರಲ್ಲಿ ಸುಮಾರು 70 ಟಿ.ಎಂ.ಸಿ. ಸೇರಿದೆ. ನೀರನ್ನು ಕಳೆದು ಲಭ್ಯವಾಗುವ ಹೆಚ್ಚುವರಿ ನೀರಿನ ಪ್ರಮಾಣವನ್ನು 448 ಟಿ.ಎಂ.ಸಿ. ಅಂದರೆ 2578 ಟಿ.ಎಂ.ಸಿ. ಸರಾಸರಿ ನೀರಿನಲ್ಲಿ ಮತ್ತು ಮೊದಲಿನ 2130 ಟಿ.ಎಂ.ಸಿ., ನೀರನ್ನು ಕಳೆದರೆ 448 ಟಿ.ಎಂ.ಸಿ. ನೀರೆಂದು ಲೆಕ್ಕಾಚಾರ ಮಾಡಿದೆ. ಈ

ಹೆಚ್ಚುವರಿ ನೀರನ್ನು ಎರಡು ಹಂತಗಳಲ್ಲಿ ಅಂದರೆ ಶೇ.65 Dependability ಲಭ್ಯತೆ 163 ಟಿ.ಎಂ.ಸಿ. ಸರಾಸರಿ ಲಭ್ಯತೆ 285 ಟಿ.ಎಂ.ಸಿ. ಎಂದು ಲೆಕ್ಕಾಚಾರ ಮಾಡಲಾಗಿದೆ. ಈ ಕೆಳಕಂಡ ಪಟ್ಟಿಯಲ್ಲಿ ಒಟ್ಟಾರೆ ಕರ್ನಾಟಕಕ್ಕೆ 511, ಮಹಾರಾಷ್ಟ್ರಕ್ಕೆ 666, ಆಂಧ್ರ ಪ್ರದೇಶಕ್ಕೆ 1001 ಟಿ.ಎಂ.ಸಿ. ನೀರು ಎಂದು ಲೆಕ್ಕಾಚಾರ ಮಾಡಿದ್ದಾರೆ. ಬಚಾವತ್ ನ್ಯಾಯ ಮಂಡಳಿ ಐತೀರ್ಪಿನಂತೆ 320 ಟಿ.ಎಂ.ಸಿ. ಮೀರದಂತೆ ಉಪಯೋಗಿಸಲು ಅನುಮತಿ ಇರುತ್ತದೆ. ಇದರಲ್ಲಿ ಪ್ರಮುಖವಾಗಿ 524 ಮೀಟರ್‌ಗೆ ಅಣೆಕಟ್ಟಿನ ಎತ್ತರವನ್ನು ಎತ್ತರಿಸಲು ಅನುಮತಿಯನ್ನು ಕೊಟ್ಟಿರುವಂಥದ್ದು ಮತ್ತು ನಮ್ಮ ಕೃಷ್ಣಾ ಮೇಲ್ದಂಡೆಯಲ್ಲಿ 303 ಟಿ.ಎಂ.ಸಿ., ತುಂಗಭದ್ರಾದಲ್ಲಿ 40 ಟಿ.ಎಂ.ಸಿ. ಹೆಚ್ಚು ಅಂದರೆ 60 ಟಿ.ಎಂ.ಸಿ. ಹೆಚ್ಚಿರುವಂಥ ಪ್ರಮುಖ ಅಂಶವಿದೆ. ಒಟ್ಟು 911 ಟಿ.ಎಂ.ಸಿ. ನೀರು ನಮಗೆ ಲಭ್ಯವಿದೆ. ಅದರ ಜೊತೆಗೆ, ಇವತ್ತು ಆಂಧ್ರಪ್ರದೇಶಕ್ಕೆ ಜೂನ್–ಜುಲೈನಲ್ಲಿ 8–10 ಟಿ.ಎಂ.ಸಿ. ನೀರನ್ನು ಕಷ್ಟಕಾಲದಲ್ಲಿ ಬಿಡಬೇಕೆನ್ನುವ ತೀರ್ಪು ಇದೆ. ನಮ್ಮ ಮುಂದೆ ಈಗೇನು ಪಡೆದುಕೊಂಡಿದ್ದೇವೆ ಜೊತೆಗೆ ಹೆಚ್ಚಿಗೆ ಪಡೆದುಕೊಳ್ಳುವುದಕ್ಕೆ special Leave petition ಹಾಕುವುದಕ್ಕೆ ಅವಕಾಶವಿದೆ. ನ್ಯಾಯಾಧಿಕರಣದಲ್ಲಿ ಪುನರ್ ಪರಿಶೀಲನೆ ಮಾಡುವಂತೆ ಕೇಳುವುದಕ್ಕೆ ಅವಕಾಶವಿದೆ. ಇದಕ್ಕೆ ತಜ್ಞರ ಮತ್ತು ನಮ್ಮ ವಕೀಲರ ಸಮಿತಿಯನ್ನು ರಚಿಸಿದ್ದೇವೆ. ಆ ತೀರ್ಮಾನ ಬಂದ ಮೇಲೆ ವಿರೋಧ ಪಕ್ಷದ ನಾಯಕರ ಜೊತೆ ಚರ್ಚೆಯನ್ನು ಮಾಡಿ ರಾಜ್ಯದ ನಿಲುವನ್ನು ಸ್ಪಷ್ಟವಾಗಿ ತಿಳಿಸುತ್ತೇವೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇದಕ್ಕೆ ಮಾರ್ಗದರ್ಶನ ಮಾಡಿದ್ದಕ್ಕಾಗಿ, ಈ ತೀರ್ಪು ಹೊರ ಬರುವುದಕ್ಕೆ ಎಲ್ಲಾ ರೀತಿಯ ಸಹಾಯ ಮಾಡಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಅಷ್ಟೇ ಅಲ್ಲ, ಪೂರಕ ಅಂದಾಜಿನಲ್ಲಿ ಅವರು 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಅದಕ್ಕೆ ಅವರಿಗೆ ಮತ್ತೊಮ್ಮೆ ಧನ್ಯವಾದಗಳನ್ನ ಅರ್ಪಿಸುತ್ತೇನೆ. ನೀರಾವರಿಗಿರುವ ಅವರ ಬದ್ಧತೆಯನ್ನು ಇದು ಸೂಚಿಸುತ್ತದೆ, ನಮ್ಮ ಸರ್ಕಾರದ ಬದ್ಧತೆಯನ್ನು ಸೂಚಿಸುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವಕೀಲರು ಮತ್ತು ನಮ್ಮ ತಾಂತ್ರಿಕ

ತಂಡದವರಿಗೂ ಕೂಡ ಧನ್ಯವಾದಗಳು, ಅಭಿನಂದನೆಯನ್ನು ಹೇಳಿ, ಈ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಭಾರತ ಸರ್ಕಾರದ ಜಲಸಂಪನ್ಮೂಲ ಸಚಿವಾಲಯವು ಅಂತರ ರಾಜ್ಯ ಕೃಷ್ಣಾ ನದಿ ಹಾಗೂ ನದಿ ಕಣಿವೆಯ ಜಲ ವಿವಾದದ ತೀರ್ಮಾನಕ್ಕಾಗಿ ದಿನಾಂಕ: 02-04-2004ರ ಅಧಿಸೂಚನೆಯಲ್ಲಿ ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿಯನ್ನು ರಚಿಸಿದೆ. ಈ ಕೃಷ್ಣಾ ಜಲ ವಿವಾದ ನ್ಯಾಯ ಮಂಡಳಿಯು (ಕೃಜವಿನ್ಯಾ-II) ದಿನಾಂಕ: 30-12-2010 ರಂದು ತನ್ನ ಅಂತಿಮ ತೀರ್ಪನ್ನು ಘೋಷಿಸಿದೆ.

2. ಈ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ- II ಬಚಾವತ್ ನ್ಯಾಯ ಮಂಡಳಿಯು (ಕೃಜವಿನ್ಯಾ-I) ಸ್ಕೀಂ-ಎ ರಡಿ ಕರ್ನಾಟಕಕ್ಕೆ ಹಂಚಿಕೆ ಮಾಡಿರುವ 734 ಟಿ.ಎಂ.ಸಿ. ಯನ್ನು ಹಾಗೆ ಉಳಿಸಿದೆ. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ-II ಈ ಕೆಳಗೆ ವಿವರಿಸಿರುವಂತೆ ವಿವಿಧ ಅವಲಂಬನೆಗಳಿಗೆ ನೀರಿನ ಲಭ್ಯತೆಯನ್ನು ಲೆಕ್ಕಾಚಾರ ಮಾಡಿದೆ.

(1) ಸರಾಸರಿ ವಾರ್ಷಿಕ ಲಭ್ಯತೆ	2578 ಟಿ.ಎಂ.ಸಿ.
(2) ಶೇ. 50ರಷ್ಟು ಅವಲಂಬನೆಯ ಲಭ್ಯತೆ	2626 ಟಿ.ಎಂ.ಸಿ.
(3) ಶೇ. 60ರಷ್ಟು ಅವಲಂಬನೆಯ ಲಭ್ಯತೆ	2528 ಟಿ.ಎಂ.ಸಿ.
(4) ಶೇ. 65ರಷ್ಟು ಅವಲಂಬನೆಯ ಲಭ್ಯತೆ	2293 ಟಿ.ಎಂ.ಸಿ.
(5) ಶೇ. 75ರಷ್ಟು ಅವಲಂಬನೆಯ ಲಭ್ಯತೆ	2173 ಟಿ.ಎಂ.ಸಿ.

3. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ-II ಈಗ ಲಭ್ಯತೆಯನ್ನು ಸರಾಸರಿ ಹಾಗೂ ಶೇ: 65ರ ಅವಲಂಬನೆಯನ್ನು ಆಧರಿಸಿ ಕ್ರಮವಾಗಿ 2578 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಿದೆ. ಹಿಂದೆ ಬಚಾವತ್ ನ್ಯಾಯ ಮಂಡಳಿ (ಕೃಜವಿನ್ಯಾ-I) ರಾಜ್ಯಗಳಿಗೆ ಹಂಚಿಕೆ ಮಾಡಿದ್ದ 2130 ಟಿ.ಎಂ.ಸಿ. (Re generation of water (ಮರು ಉತ್ಪತ್ತಿ ನೀರು) 70 ಟಿ.ಎಂ.ಸಿ. ಸೇರಿದೆ) ನೀರನ್ನು ಕಳೆದು ಲಭ್ಯವಾಗುವ ಹೆಚ್ಚುವರಿ ನೀರಿನ ಪ್ರಮಾಣವನ್ನು 448 ಟಿ.ಎಂ.ಸಿ. (2578-2130) ಎಂದು ಲೆಕ್ಕಾಚಾರ ಮಾಡಲಾಗಿದೆ. ಈ ಹೆಚ್ಚುವರಿ ನೀರನ್ನು ಎರಡು ಹಂತಗಳಲ್ಲಿ ಅಂದರೆ ಶೇ.65ರ ಅವಲಂಬನದಲ್ಲಿ ಲಭ್ಯತೆಯನ್ನು 163 ಟಿ.ಎಂ.ಸಿ. (2293-2130) ಮತ್ತು ಸರಾಸರಿ

ಲಭ್ಯತೆಯನ್ನು 285 ಟಿ.ಎಂ.ಸಿ. (2578–2293) ಎಂದು ಲೆಕ್ಕಾಚಾರ ಮಾಡಲಾಗಿದ್ದು, ಈ ಕೆಳಗೆ ವಿವರಿಸಿರುವಂತೆ ಮೂರು ರಾಜ್ಯಗಳಿಗೆ ಹಂಚಿಕೆ ಮಾಡಿದೆ;

(ಟಿ.ಎಂ.ಸಿ.ಯಲ್ಲಿ)

	ಕೃಜವಿನ್ಯಾ– I	ಕೃಷ್ಣಾಜಲ ವಿವಾದ ನ್ಯಾಯಾಧಿಕರಣ II				
ರಾಜ್ಯ	ಶೇ, 75ರಷ್ಟು ಅವಲಂಬನೆಯನ್ನು ಆಧರಿಸಿ 2130 ಟಿ.ಎಂ.ಸಿ.ಯಲ್ಲಿ (ಮರು ಉತ್ಪತ್ತಿ ನೀರು ಸೇರಿ) ಹಂಚಿಕೆ ಮಾಡಿರುವುದು	ಶೇ. 75ರಷ್ಟು ಅವಲಂಬನೆಯಂತೆ ಲಭ್ಯವಾಗುವ 163 ಟಿ.ಎಂ.ಸಿ. ಹೆಚ್ಚುವರಿಯಲ್ಲಿ		ಒಟ್ಟು (3+4)	ಸರಾಸರಿ ಲಭ್ಯತೆ 285 ಟಿ.ಎಂ.ಸಿ. ಹೆಚ್ಚುವರಿಯಲ್ಲಿ	ಒಒಟ್ಟು (2+5+6)
		ಯೋಜನೆಗಳಿಗೆ	ನದಿಯಲ್ಲಿ ಕನಿಷ್ಟ ಹರಿವಿಗಾಗಿ			
1	2	3	4	5	6	7
ಕರ್ನಾಟಕ	734	65	7	72	105	911
ಮಹಾರಾಷ್ಟ್ರ	585	43	3	46	35	666
ಆಂಧ್ರಪ್ರದೇಶ	811	39	6	45	145	1001
ಒಟ್ಟು	**2130**	**147**	**16**	**163**	**285**	**2578**

ಒಟ್ಟಾರೆ ಈ ಹೆಚ್ಚುವರಿ ನೀರಿನಲ್ಲಿ ಕರ್ನಾಟಕದ ಪಾಲು 177 ಟಿ.ಎಂ.ಸಿ., ಮಹಾರಾಷ್ಟ್ರದ ಪಾಲು 81 ಟಿ.ಎಂ.ಸಿ. ಹಾಗೂ ಆಂಧ್ರಪ್ರದೇಶದ ಪಾಲು 190 ಟಿ.ಎಂ.ಸಿ. ಆಗಿರುತ್ತದೆ.

4. ಬಚಾವತ್ ನ್ಯಾಯ ಮಂಡಳಿಯ ಐತೀರ್ಪಿನಂತೆ (ಕೃಜವನ್ಯಾ–I) ತುಂಗಭದ್ರಾ ಉಪಕೊಳ್ಳದಲ್ಲಿ 320 ಟಿ.ಎಂ.ಸಿ. ಮೀರದಂತೆ ಉಪಯೋಗಿಸಲು ಅನುಮತಿ ಇರುತ್ತದೆ. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–II ರ ತೀರ್ಪಿನಂತೆ ಈ ಪ್ರಮಾಣವನ್ನು 360 ಟಿ.ಎಂ.ಸಿ.ಗೆ ಹೆಚ್ಚಿಸಿ, ತುಂಗಾ ಮೇಲ್ದಂಡೆ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಮತ್ತು ಸಿಂಗಟಲೂರು ಏತ ನೀರಾವರಿ ಯೋಜನೆಗಳಿಗೆ 40 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿ, ತುಂಗಭದ್ರಾ ಉಪ ಕೊಳ್ಳದಲ್ಲಿ 360 ಟಿ.ಎಂ.ಸಿ. ಪ್ರಮಾಣವನ್ನು ಮೀರದಂತೆ ನೀರನ್ನು ಉಪಯೋಗಿಸಿಕೊಳ್ಳಲು

ನಿಗದಿಪಡಿಸಲಾಗಿದೆ. ಈಗ ಹೆಚ್ಚಿಸಿರುವ ಗರಿಷ್ಟ ಪ್ರಮಾಣದ ಆಧಾರದ ಮೇಲೆ ಈ ಮೂರು ಯೋಜನೆಗಳಿಗೆ ಕೇಂದ್ರ ಸರ್ಕಾರದ ತೀರುವಳಿ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

5. ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು ಪ್ರಸ್ತುತ ಜಲಾಶಯದ ಗರಿಷ್ಠ ಮಟ್ಟವನ್ನು 519.60 ಮೀ. ನಿಂದ 524.256 ಮೀ. ವರೆಗೆ ಎತ್ತರಿಸಲು ಅನುಮತಿ ದೊರಕಿದೆ. ಇದರಿಂದ ಒಟ್ಟಾರೆ ಕಷ್ಣಾ ಮೇಲ್ದಂಡೆ ಯೋಜನೆಯಡಿ 303 ಟಿ.ಎಂ.ಸಿ. ಬಳಸಲು ಅನುಮತಿ ದೊರಕಿರುತ್ತದೆ. (ಸ್ಕೀಂ–ಎ ರಡಿ ಹಂತ–I ಮತ್ತು ಹಂತ–II ರಲ್ಲಿ ಈಗಾಗಲೇ ಹಂಚಿಕೆ ಆಗಿರುವ 173 ಟಿ.ಎಂ.ಸಿ. ಗೆ ಹೆಚ್ಚುವರಿಯಾಗಿ 130 ಟಿ.ಎಂ.ಸಿ. ಹಂತ–III ರಡಿಯಲ್ಲಿ ಈಗ ಲಭ್ಯವಾಗಿದೆ). ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524.256 ಮೀ.ವರೆಗೆ ಎತ್ತರಿಸಲು ಕರ್ನಾಟಕ ರಾಜ್ಯವು ತೀರುವಳಿಗಾಗಿ ಪ್ರಸ್ತಾವನೆ ಸಲ್ಲಿಸಿದ ನಂತರ, ಕಣಿವೆಯ ರೈತರುಗಳ ಹಿತಾಸಕ್ತಿಯನ್ನು ಹಾಗೂ ಹೆಚ್ಚಿನ ನೀರಿನ ಬಳಕೆಯನ್ನು ಗಮನಿಸಿ, ಸಂಬಂಧಿಸಿದ ಕೇಂದ್ರ ಸರ್ಕಾರದ ಪ್ರಾಧಿಕಾರಗಳು ತ್ವರಿತವಾಗಿ ತೀರುವಳಿಗಳನ್ನು ನೀಡಲು ಪರಿಗಣಿಸಬೇಕೆಂದು ನ್ಯಾಯಾಧಿಕರಣದ ಆದೇಶದಲ್ಲಿ ತಿಳಿಸಲಾಗಿದೆ. ಅದರಂತೆ ರಾಜ್ಯ ಸರ್ಕಾರವು ಅಗತ್ಯವಿರುವ ಎಲ್ಲಾ ತೀರುವಳಿಗಳನ್ನು ಪಡೆದುಕೊಳ್ಳಲು ಕೂಡಲೇ ಪ್ರಕ್ರಿಯೆಗಳನ್ನು ಪ್ರಾರಂಭಿಸುವುದು.

6. ಕೃಷ್ಣಾ ನದಿಯು ಆಂಧ್ರ ಪ್ರದೇಶದ ಸರಹದ್ದನ್ನು ಪ್ರವೇಶಿಸಿದ ನಂತರ ನದಿಯ ಮೇಲ್ಭಾಗದಲ್ಲಿ ಒಂದೇ ಯೋಜನೆಯಾದ ಜುರಾಲಾ ಯೋಜನೆ ಮಾತ್ರವೇ ಇದ್ದು ಅದರ ಒಟ್ಟು ಹಂಚಿಕೆ ಸುಮಾರು 35 ಟಿ.ಎಂ.ಸಿ. ಆಗಿರುತ್ತದೆ. ಸದರಿ ಯೋಜನೆ ಅಡಿಯಲ್ಲಿ ಮುಂಗಾರು ಹಂಗಾಮಿನಲ್ಲಿ ತೊಂದರೆ ಆದ ಬಗ್ಗೆ ಕೃಷ್ಣಾ ಐತೀರ್ಪು ಅನುಷ್ಠಾನ ಮಂಡಳಿಗೆ ಮನವರಿಕೆ ಆದಲ್ಲಿ ಹಾಗೂ ಅಗತ್ಯತೆ ಕಂಡುಬಂದಲ್ಲಿ ಜೂನ್ ಹಾಗೂ ಜುಲೈ ಮಾಸಗಳಲ್ಲಿ (as per needs as may be assessed by the Implementation Board), ಸುಮಾರು 8ರಿಂದ 10 ಟಿ.ಎಂ.ಸಿ. ನೀರನ್ನು ನಿಯಂತ್ರಿತ ಪ್ರಮಾಣದಲ್ಲಿ ಬಿಡುಗಡೆ ಮಾಡಲು ನ್ಯಾಯಾಧಿಕರಣವು ತಿಳಿಸಿದೆ.

7. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ಆದೇಶದ ಅನುಷ್ಠಾನಕ್ಕಾಗಿ, Krishna Water Decision-Implementation Board ಅನ್ನು ಕೇಂದ್ರ ಸರ್ಕಾರವು ರಚಿಸಬೇಕೆಂದು ಹಾಗೂ ತೀರ್ಪು ಪ್ರಕಟಣೆ ಆದ ಮೂರು ತಿಂಗಳೊಳಗಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮಂಡಳಿಯ ಸದಸ್ಯರುಗಳನ್ನು ನೇಮಿಸಲು ನ್ಯಾಯಾಧಿಕರಣವು ನಿರ್ದೇಶಿಸಿರುತ್ತದೆ. ನ್ಯಾಯಮಂಡಳಿಯ ತೀರ್ಪನ್ನು ಕಾರ್ಯಗತಗೊಳಿಸಲು ತಯಾರಿಸಿದ ಯೋಜನೆಯನ್ನು ಅನುಷ್ಠಾನಗೊಳಿಸಲು ರಚಿಸಿದ Krishna Water Decision-Implementation Board ನ ವ್ಯಾಪ್ತಿಗೆ ತುಂಗಭದ್ರಾ ಜಲಾಶಯ ಹಾಗೂ ಸಂಬಂಧಿಸಿದ ಎಲ್ಲಾ ಕಾಲುವೆಗಳ ನಿಯಂತ್ರಣ ಮತ್ತು ರಾಜೋಲಿಬಂಡಾ ತಿರುವು ಯೋಜನೆಗಳ ಆಡಳಿತಾತ್ಮಕ ನಿಯಂತ್ರಣವು ಬರುವುದೆಂದು ಆದೇಶದಲ್ಲಿ ತಿಳಿಸಲಾಗಿದೆ. ಸದರಿ ಮಂಡಳಿಯಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಪ್ರತಿನಿಧಿಗಳು ಕಾರ್ಯನಿರ್ವಹಿಸಲು ಅವಕಾಶ ಇರುತ್ತದೆ.

8. ಕರ್ನಾಟಕ ರಾಜ್ಯಕ್ಕೆ ಹಂಚಿಕೆ ಮಾಡಲಾಗಿರುವ ಒಟ್ಟು 911 ಟಿ.ಎಂ.ಸಿ. ಪ್ರಮಾಣದಲ್ಲಿ 7 ಟಿ.ಎಂ.ಸಿ. ನೀರಿನ ಪ್ರಮಾಣವನ್ನು ನದಿಯಲ್ಲಿನ ಕನಿಷ್ಠ ಹರಿವಿಗಾಗಿ ನಿಗದಿಪಡಿಸಲಾಗಿದೆ. ಇದರಿಂದ ಒಟ್ಟಾರೆ ಕರ್ನಾಟಕ ರಾಜ್ಯಕ್ಕೆ ಸರಾಸರಿ ವರ್ಷದಲ್ಲಿ 904 ಟಿ.ಎಂ.ಸಿ. ರಷ್ಟು ನೀರನ್ನು ವಿವಿಧ ಯೋಜನೆಗಳಿಗೆ ಬಳಸಲು ಅನುಮತಿ ದೊರಕಿರುತ್ತದೆ.

9. ಕರ್ನಾಟಕದ ನ್ಯಾಯವಾದಿಗಳು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ ಐತೀರ್ಪಿನ ಬಗ್ಗೆ ಪ್ರಥಮವಾಗಿ ನೀಡಿರುವ ಅಭಿಪ್ರಾಯದಂತೆ ನಮಗೆ ಎರಡು ಪರ್ಯಾಯ ಮಾರ್ಗಗಳಿವೆ–(1) ಅಂತರ ರಾಜ್ಯ ಜಲ ವಿವಾದ ಕಾಯ್ದೆ 1956ರ ಕಲಂ 5(3)ರಡಿಯಲ್ಲಿ ನ್ಯಾಯ ಮಂಡಳಿಯ ಮುಂದೆ ಈ ತೀರ್ಪಿನ ಸ್ಪಷ್ಟೀಕರಣ ಅಥವಾ ಮಾರ್ಗದರ್ಶನ ಕೋರುವುದು; (2) ಸಂವಿಧಾನದ ಆರ್ಟಿಕಲ್ 136ರ ಕೆಳಗೆ ಸರ್ವೋಚ್ಚ ನ್ಯಾಯಾಲಯದಲ್ಲಿ SLP ದಾಖಲಿಸಿ ನ್ಯಾಯ ಮಂಡಳಿಯ ಆದೇಶವನ್ನು ಪ್ರಶ್ನಿಸುವುದು (challenge).

10. ನ್ಯಾಯ ಮಂಡಳಿಯ ಈ ವರದಿಯು ಕಾನೂನು ಹಾಗೂ ತಾಂತ್ರಿಕ ವಿವರಗಳನ್ನೊಳಗೊಂಡ 834 ಪುಟಗಳನ್ನು ಹೊಂದಿರುತ್ತದೆ. ಈ ವರದಿಯ ಪೂರ್ಣ ಇಂಗಿತಾರ್ಥವನ್ನು ತಿಳಿದುಕೊಳ್ಳುವ ಅವಶ್ಯಕತೆ ಇದ್ದು,

ವರದಿಯ ವಿವರವಾದ ಅಧ್ಯಯನ ಹಾಗೂ ಆಳವಾದ ಪರಿಶೀಲನೆಗಾಗಿ ಕಾನೂನು ಹಾಗೂ ತಾಂತ್ರಿಕ ಪರಿಣಿತರುಗಳನ್ನೊಳಗೊಂಡ ಒಂದು ಸಮಿತಿಯನ್ನು ದಿನಾಂಕ: 01-01-2011ರ ಸರ್ಕಾರದ ಆದೇಶದಲ್ಲಿ ರಚಿಸಲಾಗಿದೆ.

11. ನ್ಯಾಯ ಮಂಡಳಿಯ ವರದಿಯ ಮೇಲೆ ಕಾನೂನು ಹಾಗೂ ತಾಂತ್ರಿಕ ಪರಿಣಿತರುಗಳು ನೀಡುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಅವುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಉಭಯ ಸದನಗಳ ನಾಯಕರುಗಳೊಂದಿಗೆ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿನ ಸಭೆಯಲ್ಲಿ ಚರ್ಚಿಸಿ, ಸಭೆಯಲ್ಲಿ ತೆಗೆದುಕೊಳ್ಳುವ ತೀರ್ಮಾನದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

12. ಸ್ಕೀಂ-ಎ ಅಡಿಯಲ್ಲಿನ 734 ಟಿ.ಎಂ.ಸಿ. ನೀರು ಹಾಗೂ ಹೆಚ್ಚುವರಿ ನೀರಿನ ಹಂಚಿಕೆಯಲ್ಲಿ ದೊರಕಿರುವ 177 ಟಿ.ಎಂ.ಸಿ. ನೀರನ್ನು ಸೇರಿಸಿ ಕರ್ನಾಟಕಕ್ಕೆ ಲಭ್ಯವಾಗುವ 911 ಟಿ.ಎಂ.ಸಿ. ನೀರನ್ನು ಪರಿಣಾಮಕಾರಿಯಾಗಿ ಬಳಸಲು ಅವಶ್ಯವಿರುವ ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಂಡು ತ್ವರಿತವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.

13. ನ್ಯಾಯಾಧಿಕರಣದ 4 ಸಂಪುಟ ಹೊಂದಿರುವ ಪೂರ್ಣ ಪ್ರಮಾಣದ ಐತೀರ್ಪಿನ ಪ್ರತಿಯನ್ನು ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೂ ಒದಗಿಸಲಾಗುವುದು.

11. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ:

ವಿಷಯ: ಲೋಕಸಭಾ ಸದಸ್ಯರಾದ ಶ್ರೀ ಹೆಚ್. ವಿಶ್ವನಾಥ್ ರವರ ಮೇಲಿನ ಹಕ್ಕುಚ್ಯುತಿ ಮಂಡನೆ ಕುರಿತು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಮಡಿಕೇರಿ): ಮಾನ್ಯ ಅಧ್ಯಕ್ಷರೆ, ದಿ: 11-01-2011 ರಂದು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ನಮ್ಮ ಮೈಸೂರು-ಕೊಡಗು ಲೋಕಸಭಾ ಸದಸ್ಯರಾದ ಸನ್ಮಾನ್ಯ ವಿಶ್ವನಾಥ್‌ರವರು ಈ ಸರ್ಕಾರದ ಬಗ್ಗೆ ಮತ್ತು ವಿಧಾನ ಸಭಾ ಅಧ್ಯಕ್ಷರ ಮೇಲೆ ಒಂದು ರೀತಿಯಲ್ಲಿ ನಮ್ಮ ಸದನದ ಗೌರವಕ್ಕೆ ಮತ್ತು ಘನತೆಗೆ ಚ್ಯುತಿ ಬರುವ ರೀತಿಯಲ್ಲಿ ಮಾತನಾಡಿರುತ್ತಾರೆ. ಅವರು ಮಾತನಾಡುವ ಸಂದರ್ಭದಲ್ಲಿ